ತ್ರೈಮಾಸಿಕ ಪತ್ರಿಕೆ

‘ಶಿಕ್ಷಕ ದಿನಾಚರಣೆಯ ಶುಭಾಶಯಗಳು’

Email: ashrayausa@gmail.com

# ಅರಿವಿನ ಅರಮನೆ

ಪುಟಗಳ ಸಂಖ್ಯೆ : 4

www.ashraya-usa.org

## ಆಶ್ರಯ ಸಂಸ್ಥೆಯ ಜ್ಞಾನ ಅಂಗಳ

## ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ಸೆಪ್ಟೆಂಬರ್ - 2019



ಉಚಿತ ಪ್ರತಿ

*ಪ್ರಕಟಣೆ ಶಾಲೆಗಳು: ಚಾ.ನಗರ ಜಿಲ್ಲೆ, ಹನೂರು ಶೈಕ್ಷಣಿಕ ವಲಯದ ಸರ್ಕಾರಿ ಹಿ.ಪ್ರಾ.ಶಾಲೆ, ಕಣ್ಣೂರು, ಸ.ಮಾ.ಹಿ.ಪ್ರಾ.ಶಾಲೆ ಹನೂರು, ಸ.ಹಿ.ಪ್ರಾ.ಶಾಲೆ ರಾಮಾಪುರ, ಸ.ಹಿ.ಪ್ರಾ.ಶಾಲೆ ಕೆಂಪಯ್ಯನಹಟ್ಟಿ, ಸ.ಹಿ.ಪ್ರಾ.ಶಾಲೆ ಅಜ್ಜೀಪುರ, ಸ.ಹಿ.ಪ್ರಾ.ಶಾಲೆ ಬಂಡಳ್ಳಿ, ಸ.ಹಿ.ಪ್ರಾ.ಶಾಲೆ, ಲೊಕ್ಕನಹಳ್ಳಿ ಮತ್ತು ಸ.ಹಿ.ಪ್ರಾ.ಶಾಲೆ ಶಾಗ್ಯ. ಸ.ಹಿ.ಪ್ರಾ.ಶಾಲೆ, ಕೌದಳ್ಳಿ, ಸ.ಹಿ.ಪ್ರಾ.ಶಾಲೆ ಹಲಗಾಪುರ.*



## ಸಂಪಾದಕರ ನುಡಿ . . .

“ಶಿಖರವನ್ನೇರಲು ಹೊರಟವನ ಹಂಬಲವೊಂದೇ ಅದು ಗುರಿ ಮುಟ್ಟುವುದು” ಅಂತೆಯೇ ಆಶ್ರಯ ಆಶಯವೊಂದೇ ಅದು ಗ್ರಾಮೀಣ ಬಡ ಮಕ್ಕಳ ಜ್ಞಾನ ಹೆಚ್ಚಿಸುವುದು.

ಶಿಕ್ಷಣದ ಧ್ಯೇಯೋದ್ದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ಮಕ್ಕಳಲ್ಲಿ ಸ್ವಕಲಿಕೆಗೆ ಅನುಕೂಲಿಸುವ ನಿಟ್ಟಿನಲ್ಲಿ ಆಶ್ರಯ ಸಂಸ್ಥೆಯು “ನೀನೇ ಮಾಡಿ ನೋಡು” ವಿಜ್ಞಾನ ಪ್ರಾಜೆಕ್ಟ್‌ಗಳನ್ನು ತಯಾಸಿಸುವ ಮೂಲಕ ವೈಜ್ಞಾನಿಕವಾಗಿ ಫಲಿತಾಂಶ ಕಂಡುಕೊಳ್ಳುವುದಕ್ಕೆ “ಕಲಿಯುವುದಕ್ಕಾಗಿ ಕಲಿ” ತತ್ವವನ್ನು ಅನುಸರಿಸುತ್ತಿದೆ.

ಮಕ್ಕಳಲ್ಲಿ ಉದುಗಿರುವ ಜ್ಞಾನ ಚಿಲುಮೆಯನ್ನು ಎತ್ತರಕ್ಕೆ ಕೊಂಡ್ಯೊಯುವ ಆಶಯವನ್ನು ಹೊಂದಿರುವ ಸಂಸ್ಥೆಯು ಫಲಾಪೇಕ್ಷೆಯಿಲ್ಲದೆ ದುಡಿಯುತ್ತಿರುವುದು ನಮ್ಮ ಹೆಮ್ಮೆಯ ವಿಷಯ.

**ಸಾವುಕರಾಜು. ಡಿ. ಶಿಕ್ಷಕ, ಕಣ್ಣೂರು. . .**

## ‘ಅಯೋನಾರ್ಡೋ ಡ ವಿಂಚಿ’ ವಾರ್ಷಿಕ ಸ್ಪರ್ಧಾ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ–ಕೆಂಪಯ್ಯನಹಟ್ಟಿ, ದ್ವಿತೀಯ ಸ್ಥಾನ ಕಣ್ಣೂರು

2018–19ನೇ ಸಾಲಿನ ವಾರ್ಷಿಕ ‘ಲಿಯೋ ನಾರ್ಡೊ ಡ ವಿಂಚಿ’ ಕಾರ್ಯಕ್ರಮವನ್ನು ಹನೂರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಜ್ಜೀಪುರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕೆಳದ ಶೈಕ್ಷಣಿಕ ವರ್ಷದಲ್ಲಿ 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿವಿಧ ಸಂಘದ ಎಲ್ಲಾ ಮಕ್ಕಳನ್ನು ಒಂದೆಡೆ ಸೇರಿ ಸ್ಪರ್ಧಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರತಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಗಳಿಸಿ ಅಂಕಗಳ ಕ್ರೋಢೀಕರಣದಲ್ಲಿ ಹನೂರು ವಲಯದ ಸರ್ಕಾರಿ ಹಿ.ಪ್ರಾ.ಶಾಲೆ, ಕೆಂಪಯ್ಯನಹಟ್ಟಿ ಶಾಲೆಯ ಮಕ್ಕಳು ಪ್ರಥಮ ಸ್ಥಾನ ಗಳಿಸಿದರು. ದ್ವಿತೀಯ ಸ್ಥಾನವನ್ನು ಸರ್ಕಾರಿ ಹಿ.ಪ್ರಾ.ಶಾಲೆ, ಕಣ್ಣೂರು ಶಾಲಾ ಮಕ್ಕಳು ಪಡೆದಿರುತ್ತಾರೆ.

ಈ ಕಾರ್ಯಕ್ರಮದಲ್ಲಿ ಹನೂರು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಟಿ.ಎನ್.ಸ್ವಾಮಿರವರು, ಚಾಮರಾಜನಗರ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳಾದ ಮಲ್ಲಿಕಾರ್ಜುನರವರು, ಬಿ.ಆರ್.ಪಿ., ಸಿ.ಆರ್.ಪಿ.ಗಳು, 10 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅರಿವಿನ ಅರಮನೆ ಗ್ರಂಥಾಲಯದ ಮುಖ್ಯಶಿಕ್ಷಕರು, ಸಹಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





## ನೂತನ ಶಾಲೆ ಕೌದಳ್ಳಿ ಮತ್ತು ಹಲಗಾಪುರ

2019–20ನೇ ಸಾಲಿನಿಂದ ಹನೂರು ತಾಲ್ಲೂಕಿನ ಸ.ಹಿ.ಪ್ರಾ.ಶಾಲೆ, ಕೌದಳ್ಳಿ ಮತ್ತು ಹಲಗಾಪುರ ಗಳನ್ನು ಶಾಲೆಗಳಲ್ಲಿ ಆಶ್ರಯ ಮಕ್ಕಳಿಗಾಗಿ ಚಿತ್ರಕಲೆ, ವಿಜ್ಞಾನ, ಕಂಪ್ಯೂಟರ್ ಶಿಕ್ಷಣ ಮತ್ತು ಗ್ರಂಥಾಲಯಗಳನ್ನು ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಪ್ರಾರಂಭಿಸಿದೆ. ಕಳೆದ ವರ್ಷ ಶಾಗ್ಯ ಶಾಲೆಯಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಮಾತ್ರ ಪ್ರಾರಂಭಿಸಿದ್ದು, ಪ್ರಸ್ತುತ ಚಿತ್ರಕಲೆ, ವಿಜ್ಞಾನ, ಬುಕ್ ಕ್ಲಬ್ ಮತ್ತು ಗ್ರಂಥಾಲಯ ಚಟುವಟಿಕೆಯನ್ನು ಸಹ ಆರಂಭಿಸಿದೆ.

## ಕಲೆ ಮತ್ತು ಸಂಗೀತದಂತೆ ವಿಜ್ಞಾನವು ಬೆಳೆಯಬೇಕು

ಕಲೆ ಮತ್ತು ಸಂಗೀತದಂತೆ ವಿಜ್ಞಾನವು ಸಹ ರಸಾನುಭೂತಿಯನ್ನುಂಟು ಮಾಡಬೇಕು. ಅಂದಾಗ ಮಾತ್ರ ವಿಜ್ಞಾನ ಕಲಿಕೆ ಅರ್ಥಪೂರ್ಣವಾಗುತ್ತದೆ. ಕಲಿಕೆ ಅರ್ಥಪೂರ್ಣವಾಗಬೇಕಾದರೆ ಬೋಧನೆ ಆಕರ್ಷಕವಾಗಿರಬೇಕು. ಈ ನಿಟ್ಟಿನಲ್ಲಿ ಬೆಂಗಳೂರಿನ ಆಶ್ರಯ ಸಂಸ್ಥೆಯು ದಾಪುಗಾಲು ಹಿಡುತ್ತಾ ಮಕ್ಕಳಿಗೆ ವಿಜ್ಞಾನ ಪ್ರಾಜೆಕ್ಟ್, ಸ್ವಕಲಿಕೆಯ ಅರವಿಂದ ಗುಪ್ತ ಪ್ರಯೋಗಗಳು, ಬೆಳಕು, ಶಬ್ಧ, ವಸ್ತು ಸ್ಥಿತಿ, ಅಯಸ್ಕಾಂತ, ಉಷ್ಣ ಇತ್ಯಾಧಿ ವಿಷಯಗಳ ಬಗ್ಗೆ ಮಾಡ್ಯುಲ್‌ಗಳನ್ನು ತಯಾರಿಸಿ ಮಕ್ಕಳಿಗೆ ಜ್ಞಾನಾರ್ಜನೆ ಮಾಡುವ ಅವಕಾಶವನ್ನು ನನಗೆ ಒದಗಿಸಿದೆ ಎಂದು ಆಶ್ರಯ ಸಂಸ್ಥೆಯ ನಿಯೋಜಿತ ವಿಜ್ಞಾನ ಶಿಕ್ಷಕಿ ಶ್ವೇತಾರವರು ತಿಳಿಸಿದರು.



### ಪರಿಸರ ಪ್ರೇಮಿ : ವಿಷ್ಣು

ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ತನ್ನ ಚಿತ್ರಕಲೆಯ ಮೂಲಕ ವಿದ್ಯಾರ್ಥಿ ಮಿತ್ರರಿಗೆ ಜಾಗೃತಿ ಮಾಡುತ್ತಿರುವ ಕೆಂಪಯ್ಯನಹಟ್ಟಿ ಸರ್ಕಾರಿ ಹಿ.ಪ್ರಾ.ಶಾಲೆಯ ವಿದ್ಯಾರ್ಥಿ ವಿಷ್ಣು.







ಬುಕ್ ಆಫ್ ದ ಮಂಥ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು




ಕಂಪ್ಯೂಟರ್ ಶಿಕ್ಷಣ ಪಡೆಯುತ್ತಿರುವ ಹನೂರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿಯರು.


# » ವಿಜ್ಞಾನ ಅರಮನೆ «

ವಿಜ್ಞಾನ ಕೌತುಕ ತಿಳಿಯಲು

## ನೀವೇ ಮಾಡಿ ನೋಡಿ: ಜಲಚಕ್ರದ ಮಾದರಿ ತಯಾರಿಕೆ

**ಬೇಕಾಗುವ ಸಾಮಗ್ರಿಗಳು :** 1. ಒಂದೇ ಅಳತೆಯ ಬಳಸಿದ ಖಾಲಿ ನೀರಿನ 3 ಬಾಟಲ್‌ಗಳು, 2) ಸ್ಟೌವ್ ಬತ್ತಿ ಅಥವಾ ಚೆನ್ನಾಸಿ ಹೊಸೆದ ಹತ್ತಿ ಬಟ್ಟೆಯ ನೂರು, 3) ಮಣ್ಣು 4) ಆರೋಗ್ಯಕರ ಸಸ್ಯದ ಸಸಿಗಳು, 5) ನೀರು ಮತ್ತು 6) ಮಂಜುಗಡ್ಡೆ




**ಮಾಡುವ ವಿಧಾನ :** ಈ ಮೇಲಿನ ಚಿತ್ರದಲ್ಲಿ ತೋರಿಸಿದಂತೆ A, B ಮತ್ತು C ಬಾಟಲಿಗಳನ್ನು ತಯಾರಿಸಿಕೊಳ್ಳಿ. ಬಾಟಲ್ 'B' ಬಿರಡೆಯಲ್ಲಿ ತೂತು ಕೊರೆದು ಲೂಪ್ ಮಾಡಿಕೊಂಡ ಬತ್ತಿ ಅಥವಾ ಹೊಸೆದ ದಾರವನ್ನು ತೂರಿಸಿ. ಬಾಟಲ್ C ಯ ಬಿರಡೆಗೆ ತೂತು ಮಾಡುವ ಅವಶ್ಯಕತೆ ಇಲ್ಲ. ಚಿತ್ರದಲ್ಲಿ ತೋರಿಸಿದಂತೆ ಅದಕ್ಕೆ ಬತ್ತಿಯನ್ನು ಕಟ್ಟಿ ಇಳಿಬಿಡಿ. ಬಾಟಲ್ B ಯಲ್ಲಿ ಹದವಾದ ಸ್ವಲ್ಪ ಮಣ್ಣನ್ನು ಚಿತ್ರದಲ್ಲಿ ತೋರಿಸಿರುವಂತೆ ತುಂಬಿ ಬಾಟಲ್ Aನಲ್ಲಿ ಸ್ವಲ್ಪ ನೀರು ತೆಗೆದುಕೊಂಡು, ಬತ್ತಿಯ ತುದಿಗಳನ್ನು ಅದರಲ್ಲಿ ಇಳಿಬಿಟ್ಟು ಮಣ್ಣು ತುಂಬಿಸಿದ ಬಾಟಲಿಯನ್ನು ಅದರ ಮೇಲೆ ಭದ್ರವಾಗಿ ಕೂಡಿಸಿ. (ಈ ಹಂತದಲ್ಲಿ ಕೆಲವು ದಿನಗಳು ಹಾಗೆಯೇ ಬಿಟ್ಟು ಲೋಮಕ್ರಿಯೆಯ ಮೂಲಕ ಮಣ್ಣು ತೇವವಾಗುವುದನ್ನು ತೋರಿಸಬಹುದು)

ಮಣ್ಣಿನಲ್ಲಿ ಯಾವುದಾದರೂ ಸಸ್ಯ ಬೀಜಗಳನ್ನು ಉದುರಿಸಿ, ಅದು ಮೊಳೆಯುವಂತೆ ಮಾಡಬಹುದು. (ಶೀಘ್ರವಾಗಿ ಪ್ರಯೋಗ ನಡೆಸಬೇಕಾದಲ್ಲಿ ಸಸಿಗಳನ್ನೇ ತಂದು ನಡೆಬಹುದು) ಹೀಗೆ ತಯಾರಿಸಿದ ಮಾದರಿಯನ್ನು ಪ್ರಯೋಗಕ್ಕೆ ಒಳಪಡಿಸುವ ದಿನ ಬಾಟಲ್ Cಯನ್ನು ಅದರ ಮೇಲೆ ಚಿತ್ರದಲ್ಲಿ ತೋರಿಸಿರುವಂತೆ ಕೂಡಿಸಬೇಕು. ಮೂರು ಬಾಟಲಿಗಳ ನಡುವೆ ಭದ್ರತೆ ಒದಗಿಸಬೇಕಾದಲ್ಲಿ ಸೆಲೋಟೇಪ್ ಹಾಕಿ ಅಂಟಿಸಿ, ಹೀಗೆ ಜೋಡಿಸಿದ A, B ಮತ್ತು C ಬಾಟಲಿಗಳ ಮಾದರಿಯನ್ನು 5 ರಿಂದ 5 ಗಂಟೆಗಳ ಕಲ ಬಿಸಿಲಿನಲ್ಲಿಡಿ.

ಬಾಟಲ್ C ಹಾಗೂ B ಬಾಟಲ್ ಗಳ ಗೋಡೆಗಳ ಮೇಲೆ ನೀರಾವಿ ಶೇಖರವಾಗುವುದನ್ನು ಕಾಣಬಹುದು.

5 ಗಂಟೆಗಳ ನಂತರ ತಣ್ಣನೆಯ ನೀರು ಮತ್ತು ಮಂಜುಗಡ್ಡೆಗಳನ್ನು ಬಾಟಲ್ Cಯಲ್ಲಿ ಹಾಕಿ. ಶೇಖರವಾದ ನೀರಾವಿ ಹನಿಗಳು ತಂಪಾಗಿ ಸಾಂದ್ರೀಕರಣಗೊಂಡು ಮಳೆಯ ಹನಿಗಳಂತೆ ಬೀಳುವುದನ್ನು ಕಾಣುತ್ತೀರಿ.

ಮಳೆಯ ನೀರು ಶುದ್ಧವಾಗಿರುವುದೆಂದು ತೋರಿಸಲು, ಬಾಟಲ್ Aನಲ್ಲಿ ಅಂತರ್ಜಲವನ್ನು, ಬಾಟಲ್ B ಶಿಲಾಗೋಳವನ್ನು, ಬಾಟಲ್ C ವಾಯುಗೋಳವನ್ನು ಪ್ರತಿನಿಧಿಸುವುದು.ಇಲ್ಲಿ ಜಲಚಕ್ರದಲ್ಲಾಗುವ ಭೌತಿಕ, ರಾಸಾಯನಿಕ ಮತ್ತು ಜೈವಿಕ ಕ್ರಿಯೆಗಳೆಲ್ಲವನ್ನೂ ಚಿತ್ರದಲ್ಲಿ ಪಟ್ಟಿ ಮಾಡಿರುವಂತೆ ವಿವರಿಸಬಹುದು.

ಮೇಲಿನ ಮಾದರಿಯಲ್ಲಿ ದ್ಯುಸಂಶ್ಲೇಷಣೆಯಲ್ಲಿ ನೀರಿನ ಪಾತ್ರವನ್ನು ಪತ್ರಗಳ ಮೂಲಕ ನಡೆಯುವ ಬಾಷ್ಪ ವಿಸರ್ಜನೆ, ಸ್ಟೊಮ್ಯಾಟಾ, ಪತ್ರಹರಿತ್ತಿನ ಪಾತ್ರಗಳನ್ನು ವಿವರಿಸಬಹುದು.

## ವೈಜ್ಞಾನಿಕ ನೆಲೆಗಟ್ಟಿನಲ್ಲಿ ವಿಜ್ಞಾನ ಕಲಿಕೆಯಾಗಬೇಕು

ವಿಜ್ಞಾನ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಅನಿರೀಕ್ಷಿತ ಬದಲಾವಣೆಗಳು ಮಾನವ ಶ್ರಮದಿಂದಾಗಿದೆ. ತನ್ನಲ್ಲಿರುವ ಬುದ್ಧಿಶಕ್ತಿಯನ್ನು ಬಹುವಿಸ್ತಾರಗೊಳಿಸುತ್ತಾ ತಂತ್ರಜ್ಞಾನ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡುತ್ತಿದ್ದಾನೆ. ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನೂ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿರುವ ಅವರಲ್ಲಿರುವ ಜ್ಞಾನದ ಫಲದಿಂದಾಗಿದೆ.

ಮಕ್ಕಳಿಗೆ ವಿಜ್ಞಾನ ವಿಷಯದ ಕಲಿಕೆ ರೋಚಕವೂ, ಆಸಕ್ತಿದಾಯಕವೂ ಮತ್ತು ಅರ್ಥಪೂರ್ಣವು ಆಗಿರಬೇಕೆಂಬುದು ಸಂಸ್ಥೆಯ ಆಶಯ. ಇಂದಿನ ವಿಜ್ಞಾನ ಶಿಕ್ಷಣ ಮಕ್ಕಳಿಗೆ ನಿಜಕ್ಕೂ ಆ ಅನುಭವವನ್ನು ನೀಡುತ್ತಿದೆಯೇ? ವಿಜ್ಞಾನ ಮೂರ್ತ ಮತ್ತು ಅಮೂರ್ತ ಹೀಗೆ ಎರಡೂ ಬಗೆಯ ಪರಿಕಲ್ಪನೆಗಳನ್ನು ಒಳಗೊಂಡಿದೆ. ಮಕ್ಕಳು ಮೂರ್ತ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲರು. ಆದರೆ ಅಮೂರ್ತ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಕಾಲಾವಕಾಶ ಬೇಕು.



ಹಾಗಾಗಿ ಸಂಸ್ಥೆಯು ಮಕ್ಕಳೇ ಅಮೂರ್ತ ಪರಿಕಲ್ಪನೆಯನ್ನು ಅರ್ಥೈಯಿಸಿಕೊಳ್ಳಲು ವಿಜ್ಞಾನ ಪ್ರಾಜೆಕ್ಟ್‌ಗಳನ್ನು ಸ್ವಯಂ ಅಧ್ಯಯನ ಮಾಡಿ ವೈಜ್ಞಾನಿಕ ಕಾರಣಗಳನ್ನು ತಿಳಿದು ಅಮೂರ್ತದಿಂದ ಮೂರ್ತದೆಡೆಗೆ ಸಾಗುತ್ತಿದ್ದಾರೆ. ಇದರಿಂದಾಗಿ ಮಕ್ಕಳು ಹೆಚ್ಚು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗಿದೆ.

ಸ್ವಕಲಿಕೆಯಿಂದ ಕಲಿತಂತಹ ಅನೇಕ ಪರಿಕಲ್ಪನೆಗಳಿಗೆ ವೈಜ್ಞಾನಿಕ ಕಾರಣಗಳನ್ನು ತಿಳಿದುಕೊಂಡು ಹೊಸ ಸನ್ನಿವೇಶಗಳಿಗೆ ಅನ್ವಯಿಸಬಲ್ಲ ಸಾಮರ್ಥ್ಯಗಳನ್ನು ಮಕ್ಕಳು ಗಳಿಸಲು ಆಶ್ರಯ ಸಂಸ್ಥೆಯು ವಿಜ್ಞಾನ ಸಂಘದ ವೇದಿಕೆಯನ್ನು ಏರ್ಪಡಿಸಿದೆ.



ಘನ, ದ್ರವ ಮತ್ತು ಅನಿಲ ವಸ್ತುಗಳ ಚಟುವಟಿಕೆ

## ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ಪರಿಹಾರ ಬೋಧನೆ

### ಗ್ರೋಭಿ ಟೆಸ್ಟ್

ಅರಿವಿನ ಅರಮನೆ ಗ್ರಂಥಾಲಯಗಳನ್ನು ಹೊಂದಿರುವ 9 ಸರ್ಕಾರಿ ಶಾಲೆಯ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗಾಗಿ ಆಶ್ರಯ ಸಂಸ್ಥೆಯು ಸಂಸ್ಥೆಯಿಂದ ಒಬ್ಬ ಕನ್ನಡ ಸವಿತರವರನ್ನು ಶಿಕ್ಷಕಿಯನ್ನು ನೇಮಿಸಿ, ವಾರಕ್ಕೊಂದು ದಿನ 'ಪರಿಹಾರ ಬೋಧನೆ' ತರಗತಿಯನ್ನು ನಡೆಸುತ್ತಿದೆ. ಕಲಿಕೆಯ ಫಲವನ್ನು ಅರಿಯಲು ಪ್ರಥಮ್ ಪಬ್ಲಿಕೇಷನ್ ಪುಸ್ತಕಗಳನ್ನು ಓದಿಸಿ ಗ್ರೋಭಿ ಪರೀಕ್ಷೆಯನ್ನು ಮೂಲಕ ಮಕ್ಕಳ ಕಲಿಕೆಯ ಮೌಲ್ಯಮಾಪನವನ್ನು ಮಾಡುತ್ತಿದೆ.



## ವಿಜ್ಞಾನ ಪದಬಂಧ

| | | | | | | | | |
|---|---|---|---|---|---|---|---|---|
| ■ | 1 | 2 | | ■ | 3 | 4 | 5 | ■ |
| 6 | | | ■ | 7 | ■ | 8 | | 9 |
| 10 | | ■ | 11 | | 12 | ■ | ■ | |
| | ■ | 13 | | ■ | 14 | 15 | ■ | |
| ■ | 16 | | ■ | ■ | ■ | 17 | | ■ |
| 18 | ■ | 19 | 20 | ■ | 21 | | ■ | 22 |
| 23 | 24 | ■ | 25 | 26 | | ■ | 27 | |
| 28 | | | ■ | | ■ | 29 | | |
| ■ | 30 | | | ■ | 31 | | | ■ |

**ಎಡದಿಂದ ಬಲಕ್ಕೆ:**

1. ನೀರಿನಲ್ಲಿ ಬೆಳೆಯುವ ಒಂದು ಹೂ (3)
3. ಕೆಲವು ಗಡಿಯಾರಗಳಲ್ಲಿನ ಒಂದು ಭಾಗ (3)
6. ಅಡುಗೆಯಲ್ಲಿ ಬಳಸುವ ಇಂಗು (3)
8. ಶಾಶ್ವತವಲ್ಲದ್ದು (3)
10. ಎಳೆ ವಯಸ್ಸಿನ ಪ್ರಾಣಿ (2)
11. ಆಸ್ಟ್ರೇಲಿಯಾದ ಪ್ರಾಣಿಗಳಲ್ಲೊಂದು (3)
13. ಮೊಟ್ಟೆ (2)
14. ಒಳ್ಳೆಜಾತಿ ಸಸ್ಯ ಪಡೆಯುವ ಒಂದು ವಿಧಾನ (2)
16. ನಿಯ ಘನಾಕೃತಿಗಳಲ್ಲೊಂದು (2)
17. ಅಳತೆಯೋ, ಆನೆಯೋ? (2)
19. ಶಬ್ದ (2)
21. ಕೆರೆ, ಕುಂಟೆಗಳಲ್ಲಿ ನೀರು ಹೆಚ್ಚಿದಾಗ ಉಂಟಾಗುವ ಅನಾಹುತ (2)
23. ನೆಲದೊಳಗಿನ ರೂಪಾಂತರಿತ ಕಾಂಡ (2)
25. ಸುಲಭವಾಗಿ ಒಡೆದು ಹೋಗುವ ಗುಣ (3)
27. ಪದ್ಯ ರಚಿಸುವವನೋ, ಆವರಿಸುವುದೋ (2)
28. ದೀರ್ಘಸೇರಿದಾಗ ಋತುಮಾನಗಳಲ್ಲಿ ಒಂದು (3)
29. ಸುಗಂಧ ದ್ರವ್ಯ (3)
30. ಎಮ್ಮೆ (3)
31. ನೈಸರ್ಗಿಕ ವಿದ್ಯುಕ್ಷೋಭೆ (3)


**ಮೇಲಿಂದ ಕೆಳಕ್ಕೆ:**

1. ಬೆಟ್ಟದ ಬದಿಯಲ್ಲಿ ನದಿಯಿಂದಾದ ಪ್ರಪಾತ (3)
2. ಹಿಂದೆ ಶಾಲೆಗಿದ್ದ ಹೆಸರು (2)
4. ನೂರು ಸಾವಿರ (2)
5. ಗಾಣದಲ್ಲಿ ಅಚ್ಚಿನ ಮಧ್ಯೆ ಇರುವ ಭಾರವಾದ ಮರದ ಉರುಳೆಗೆ ಈ ಹೆಸರೂ ಇದೆ (2)
6. ವಿಜ್ಞಾನದಲ್ಲಿ ನೊಬೆಲ್ ಪಾರಿತೋಷಕಗಳಿಸಿದ ಮೊದಲ ಭಾರತೀಯ ವಿಜ್ಞಾನಿ (3)
7. ನಾವು ಇದರ ವಂಶದವರಂತೆ (2)
9. ಕಣವಾದವನ್ನು ಹೇಳಿದ ಪುರಾತನ ಭಾರತೀಯ (3)
11. ಗಿಡದ ಪ್ರಧಾನ ಭಾಗ (2)
12. ಎರಡನೆಯ ಅಕ್ಷರಕ್ಕೆ 'ಷ' ಒತ್ತುಕೊಟ್ಟರೆ ನಕ್ಷತ್ರಪುಂಜ (2)
13. ಮೊಳಕೆ (3)
15. ಸಮುದ್ರೋತ್ಪನ್ನ ಆಹಾರ ಪದಾರ್ಥಗಳಲ್ಲೊಂದು (3)
18. ಆಗಾಗ್ಗೆ ಬಣ್ಣ ಬದಲಾಯಿಸುವ ಪ್ರಾಣಿ (3)
20. ಎದೆಗೂಡು, ಹೊಟ್ಟೆ ಪ್ರತ್ಯೇಕಿಸುವ ಪದರ (2)
21. ಒಂದು ತರಕಾರಿ (2)
22. ಮೀನಿನ ಉಸಿರಾಟದ ಅಂಗ (3)
24. ಸಣ್ಣ ಕೊಂಬೆ (3)
26. ಭೀತಿಗೆ, ಹೃದಯದ ಬಡಿತವನ್ನು ಹೀಗೆನ್ನುತ್ತಾರೆ (2)
27. ಬೆಳಕಿಲ್ಲದಾಗಿನ ಸ್ಥಿತಿ (3)
29. ಹನ್ನೆರಡು ಅಂಗುಲ (2)

ವಿಜ್ಞಾನ ಪದಬಂಧದ ಸರಿ ಉತ್ತರವನ್ನು ಕಳುಹಿಸಿದವರ ಹೆಸರು ಮತ್ತು ವಿಳಾಸ ಪ್ರಕಟಿಸಲಾಗುವುದು. ಅಲ್ಲದೇ ಸ್ವತಃ ವಿದ್ಯಾರ್ಥಿಗಳೇ ವಿಜ್ಞಾನ ಪ್ರಶ್ನೆಗಳನ್ನೊಳಗೊಂಡ ಸ್ವರಚಿತ ಪದಬಂಧವನ್ನು ರಚಿಸಿ, ಸಲ್ಲಿಸಿದರೆ ಅವರಿಗೆ ಸೂಕ್ತ ಬಹುಮಾನವನ್ನು ಸಹ ನೀಡಲಾಗುವುದು.

# » ಚಿತ್ರಕಲಾ ಅರಮನೆ «


### ಕೌಶಲ ಬೆಳವಣಿಗೆಗಾಗಿ




ವಿಷ್ಣು. 8ನೇ ತರಗತಿ
ಸರ್ಕಾರಿ ಹಿ.ಪ್ರಾ.ಶಾಲೆ, ಕೆಂಪಯ್ಯನಹಟ್ಟಿ



ರಮೇಶ. ಎ. 8ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಕೆಂಪಯ್ಯನಹಟ್ಟಿ



ಪುಣ್ಯಲಕ್ಷ್ಮಿ. 7ನೇ ತರಗತಿ
ಸರ್ಕಾರಿ ಕೆ.ಪಿ.ಎಸ್. ಶಾಲೆ, ಲೊಕ್ಕನಹಳ್ಳಿ




ದೀಪಕ್. ಸಿ. 8ನೇ ತರಗತಿ
ಸರ್ಕಾರಿ ಕೆ.ಪಿ.ಎಸ್. ಶಾಲೆ, ಲೊಕ್ಕನಹಳ್ಳಿ

ಈ ಬಾರಿ ಹನೂರು ವಲಯದ 9 ಸರ್ಕಾರಿ ಶಾಲೆಗಳಲ್ಲಿ ಚಿತ್ರಕಲೆ ತರಗತಿಯನ್ನು ಸರ್ಕಾರೇತರ ಆಶ್ರಯ ಸಂಸ್ಥೆ ಪ್ರಾರಂಭಿಸಿದೆ. ಕಳೆದ ಮೂರು ತಿಂಗಳಲ್ಲಿ ಪೆನ್ಸಿಲ್ ಶೇಡಿಂಗ್, ಸ್ಟಿಲ್ ಲೈಫ್, ಪೋರ್ಟ್ರೇಟ್, ಲ್ಯಾಂಡ್‌ಸ್ಕೇಪ್‌ಗಳಂತಹ ವ್ಯಕ್ತಿ ಚಿತ್ರಗಳು, ವಸ್ತು ಚಿತ್ರಗಳನ್ನು ಸಂಸ್ಥೆಯ ನೌಕರ ಸಿದ್ದರವರು ಕಲಿಸುತ್ತಿದ್ದಾರೆ. ಆಗಸ್ಟ್ ತಿಂಗಳಲ್ಲಿ ವಿವಿಧ ಶಾಲೆಯ ಮಕ್ಕಳು ತಾವು ಚಿತ್ರಿಸಿರುವ ಚಿತ್ರಗಳನ್ನು ಈ ಮೇಲ್ಭಾಗದಲ್ಲಿ ತೋರಿಸಲಾಗಿದೆ. ಇದರಲ್ಲಿ ಕೆಂಪಯ್ಯನಹಟ್ಟಿ ಶಾಲೆಯ ವಿದ್ಯಾರ್ಥಿಗಳು ಸುಂದರ ಕಲಾಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ. ಮಕ್ಕಳಲ್ಲಿ ಉದುಗಿರುವ ಕೌಶಲ್ಯವನ್ನು ಹೊರೆಹಚ್ಚೆ ಆಶ್ರಯ ಸಂಸ್ಥೆಯ ನಿಯೋಜಿತ ನೌಕರ ಸಿದ್ದರಾಜುರವರು ಪೋಷಿಸುತ್ತಿದ್ದಾರೆ.

ಲಲಿತ ಕಲೆಗಳಲ್ಲಿ ಚಿತ್ರಕಲೆಯು ಕೂಡ ತನ್ನದೇ ಆದ ಮಹತ್ವವನ್ನು ಹೊಂದಿದೆ. ಚಿತ್ರಕಲೆಯು ಕೇವಲ ಅಭ್ಯಾಸವಲ್ಲ, ಮಾನವನು ತನ್ನ ಭಾವನೆಗಳನ್ನು, ದುಖಃ ದುಮ್ಮಾನಗಳನ್ನು ಹಾಗೂ ಸಂತೋಷವನ್ನು ವ್ಯಕ್ತಿಪಡಿಸುವಲ್ಲಿ ಪ್ರಮುಖ ಸ್ಥಾನವಹಿಸುತ್ತದೆ. ಮಕ್ಕಳ ಕಲಿಕೆಯಲ್ಲಿ ಸರಳ ಹಾಗೂ ಸೃಜನಾತ್ಮಕ ವಿದ್ಯಾಭ್ಯಾಸ ಮಾಡುವಲ್ಲಿ ಚಿತ್ರಕಲೆಯು ತನ್ನದೇ ಆದ ಛಾಪು ಮೂಡಿಸುತ್ತದೆ.

ಸರ್ಕಾರಿ ಶಾಲೆಗಳಂದರೆ ಮೂಗುಮುರಿಯುವ ಪೋಷಕರಿಗೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಇಷ್ಟು ಸುಂದರ ಚಿತ್ರಗಳನ್ನು ಬರೆದಿರುವುದು ಆಶ್ಚರ್ಯವೆನಿಸುತ್ತದೆ. ಎಷ್ಟೋ ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರು ಇದ್ದರೂ ಸಹ ಸರ್ಕಾರಿ ಶಾಲಾ ಮಕ್ಕಳಷ್ಟು ಪ್ರತಿಭಾನ್ವಿತ ಕಲೆಗಾರರನ್ನು ತಯಾರು ಮಾಡಲು ಸಾಧ್ಯವಿಲ್ಲ.



## ಎಂ.ಎಲ್.ಎಲ್. ಚಟುವಟಿಕೆಯಲ್ಲಿ ಮೈಂಡ್ ಮ್ಯಾಪ್

ಗ್ರಂಥಾಲಯದಲ್ಲಿ ನೂತನ ಕಾರ್ಯಕ್ರಮವಾಧ ಕಥೆ ಆಧಾರಿತ ಚಟುವಟಿಕೆಗಳಿಗೆ ಮೈಂಡ್ ಮ್ಯಾಪ್ ಬಳಸಿಕೊಂಡು ಮಕ್ಕಳಿಗೆ ವಿದ್ಯಾರ್ಥಿ ಕೇಂದ್ರಿತ ಕಲಿಕೆ ಉಂಟು ಮಾಡುವ ಉದ್ದೇಶದಿಂದ ಹನೂರು ವಲಯದ 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆಯೋಜಿಸಲಾಗುತ್ತಿದೆ. ಕಲಿಷ್ಠ ಕಲಿಕಾ ಮಟ್ಟ ಉದ್ದೇಶ ಆಧಾರಿತ ಚಟುವಟಿಕೆಗಳನ್ನು ಈ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಯಶಸ್ವಿಯಾಗಿದೆ. ಇದೇ ಚಟುವಟಿಕೆಗಳಿಗೆ ಮೈಂಡ್‌ಮ್ಯಾಪ್‌ಗಳನ್ನು ಈ ವರ್ಷದಿಂದ ರಚಿಸಲಾಗುತ್ತಿದೆ.

ಪ್ರತಿ ಚಟುವಟಿಕೆಗಳಿಗೂ ಗ್ರಂಥಪಾಲಕಿಯರ ಮಾರ್ಗದರ್ಶನದಲ್ಲಿ ಮೈಂಡ್ ಮ್ಯಾಪ್‌ಗಳನ್ನು ತಯಾರಿಸಿ ವಿಷಯ ವಿಸ್ತಾರವನ್ನು ಅರ್ಥೈಯಿಸಿಕೊಳ್ಳುತ್ತಿದ್ದಾರೆ. ಅದರಲ್ಲೂ ವಿಜ್ಞಾನ ಪರಿಕಲ್ಪನೆಗಳಿಗೆ ಹೆಚ್ಚು ಮೈಂಡ್ ಮ್ಯಾಪ್ ಬರೆದಿದ್ದಾರೆ.




# ಪ್ರತಿಭಾ ಕಾರಂಜಿ ಚಿತ್ರಕಲಾ ಸ್ಪರ್ಧೆಯಲ್ಲಿ ಮುನಿರಾಜು ಮತ್ತು ವಿಕಾಸ್ ವಿಜೇತರು





ವಿಕಾಸ್. ಸ.ಹಿ.ಪ್ರಾ.ಶಾಲೆ,ಕಣ್ಣೂರು "SAVE WATER"



2019–20ನೇ ಸಾಲಿನ ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಆಶ್ರಯ ಸಂಸ್ಥೆಯಿಂದ ತರಬೇತಿ ಪಡೆಯುತ್ತಿರುವ ಸರ್ಕಾರಿ ಹಿ.ಪ್ರಾ.ಶಾಲೆ, ಅಜ್ಜೀಪುರ ಮತ್ತು ಕಣ್ಣೂರು ಶಾಲೆಯ ವಿದ್ಯಾರ್ಥಿಗಳಾದ ಮುನಿರಾಜು ಮತ್ತು ವಿಕಾಸ್ ಪ್ರಥಮ ಸ್ಥಾನ ಪಡೆದಿದ್ದಾರೆ.

# » ಮಕ್ಕಳ ಅರಮನೆ «

**ಪ್ರತಿಭೆ ಅನಾವರಣಗೊಳಿಸಲು**

## ವಿದ್ಯಾರ್ಥಿ ಸ್ವರಚಿತ ಕಥೆ : ನ್ಯಾಯ

ಬೇಗೂರು ಎಂಬ ಒಂದು ಪುಟ್ಟ ಹಳ್ಳಿ. ಈ ಹಳ್ಳಿಯಲ್ಲಿ ಒಂದು ಬಡ ಕುಟುಂಬ ವಾಸವಾಗಿತ್ತು. ಈ ಕುಟುಂಬದಲ್ಲಿ ನಾಲ್ಕು ಜನರಿದ್ದರು. ಅಪ್ಪ, ಅಮ್ಮ, ಅಕ್ಕ, ತಂಗಿ. ತಂದೆ-ತಾಯಿ ಮಾದಪ್ಪ ಮತ್ತು ಲಕ್ಷ್ಮಮ್ಮ. ಅವರಿಗೆ ಒಂದು ಚಿಕ್ಕ ಆಸೆಯಿತ್ತು. ಇವರಿಗೆ ಇಬ್ಬರೂ ಮಕ್ಕಳನ್ನು ಚೆನ್ನಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂಬ ಆಸೆ ಇತ್ತು. ತಂದೆ-ತಾಯಿಯ ಆಸೆಯಂತೆ ಇಬ್ಬರೂ ಮಕ್ಕಳು ಮುಂದೆ ಒಳ್ಳೆಯ ವಿದ್ಯಾಭ್ಯಾಸ ಮಾಡಿದರು. ದೊಡ್ಡ ಮಗಳು 19 ವರ್ಷದ ಶೃತಿ ಮತ್ತು ಚಿಕ್ಕವಳು 13 ವರ್ಷದ ಸಿರಿ. ಹೆತ್ತವರ ಆಸೆಯಂತೆ ಶೃತಿ ಓದಿ ಡಾಕ್ಟರ್ ಕೆಲಸ ಗಳಿಸುತ್ತಾರೆ. ಶೃತಿ ತನ್ನ ತಂಗಿಯೂ ಕೂಡ ಒಂದು ಒಳ್ಳೆಯ ಹುದ್ದೆಯನ್ನು ಹೊಂದಬೇಕೆಂಬ ಆಸೆ ಇತ್ತು. ಇಬ್ಬರೂ ಒಟ್ಟಿಗೆ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಮಹಾದಾಸೆ ಇತ್ತು. ಇದು ಶೃತಿಯ ಆಸೆ ಮಾತ್ರವಲ್ಲ ಸಿರಿಯ ಆಸೆ ಕೂಡ ಆಗಿತ್ತು. ಶೃತಿ ಅವಳ ಆಸೆಯಂತೆ ದೊಡ್ಡ ಮನೆ ಕಳುಹಿಸಿ ಅವಳ ತಂದೆ ತಾಯಿ ಮತ್ತು ತಂಗಿ ಮೂವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಶೃತಿ ಮದುವೆಯ ವಯಸ್ಸಿಗೆ ಬಂದ ಹುಡುಗಿ ಅದಕ್ಕೆ ಅವಳ ಅಪ್ಪ ಅಮ್ಮ ಒಟ್ಟಿಗೆ ಕೂತು ಯೋಚಿಸಿ ಒಂದು ಹುಡುಗನನ್ನು ಹುಡುಕಿದರು. ಆ ಹುಡುಗನ ಹೆಸರು ಕುಮಾರ ಅವನೂ ಕೂಡ ಇಂಜಿನಿಯರ್ ಕೆಲಸದಲ್ಲಿದ್ದನು. ಅವರು ತುಂಬಾ ಶ್ರೀಮಂತರಾಗಿದ್ದರು. ಶೃತಿಯ ಅಪ್ಪ ಹೇಗೋ ದೊಡ್ಡ ಮಗಳನ್ನು ಮದುವೆ ಮಾಡಿ ಕಳುಹಿಸಿದರು. ಮದುವೆಯ ಸಂಭ್ರಮದಲ್ಲಿ ಎಲ್ಲರೂ ಖುಷಿಯಾಗಿದ್ದರು. ಆದರೆ ಈ ಕಡೆ ಮಗಳನ್ನು ಗಂಡನ ಮನೆಗೆ ಕಳುಹಿಸಬೇಕೆಂಬ ದುಃಖ ಹೆಚ್ಚಾಯಿತು. ಏನು ಮಾಡುವುದಕ್ಕಾಗಲ್ಲ ಹೆಣ್ಣು ಅಂದ ಮೇಲೆ ಗಂಡನ ಮನೆಗೆ ಹೋಗಲೇ ಬೇಕು. ಶೃತಿ ಅವಳ ಗಂಡನ ಮನೆಗೆ ಹೊರಟಳು. ಇನ್ನೂ ಚಿಕ್ಕ ಮಗಳು ಇವಳನ್ನು ಕೂಡ ಬೇಗ ಮದುವೆ ಮಾಡಿ ಕಳುಹಿಸದೆ ತನ್ನೊಡನೆಯೇ ಬೆಳೆಸುತ್ತಾರೆ. ಒಂದು ದಿನ ಸಿರಿ ಕಾಲೇಜಿಗೆ ಹೋಗಿ ಬರುವ ಸಂದರ್ಭದಲ್ಲಿ ನಾಲ್ಕು ಜನ ರೌಡಿಗಳು ಇವಳನ್ನು ಅಪಹರಿಸಿ ಕ್ರೂರವಾಗಿ ಕೊಲ್ಲುತ್ತಾರೆ. ಮನೆಗೆ ಬರದ ಸಿರಿಯನ್ನು ಎಲ್ಲಾ ಕಡೆ ಹುಡುತ್ತಾ, ಅವಳ ಸ್ನೇಹಿತರೆಲ್ಲ ವಿಚಾರಿಸಿದರೂ ಅವಳ ಸುಳಿವು ಸಿಗಲಿಲ್ಲ. ಅಷ್ಟೊತ್ತಿಗೆ ಮಾದಪ್ಪನು ಆಗಮಿಸಿ ಸಿರಿಯನ್ನು ಕರೆಯುತ್ತಾನೆ. ಆಗ ಹೆಂಡತಿ ನಡೆದ ವಿಷಯವನ್ನು ವಿವರಿಸುತ್ತಾನೆ. ಸಿರಿ ನಾನು ಹೋಗಿ ಅವಳನ್ನು ಹುಡುಕಿ ಕರೆದುಕೊಂಡು ಬರುತ್ತೇನೆ ಬರುವುದು ಸ್ವಲ್ಪ ಸಮಯವಾಗಬಹುದು ನೀನು ಊಟ ಮಾಡಿ ಮಲಗಿಕೊ ಎಂದು ಮಾದಪ್ಪ ಹೇಳಿ ಹೊರಟನು. ಅದಕ್ಕೆ ಅವಳು ಆಯ್ತು ಎಂದು ಊಟ ಮಾಡಿ ಮಲಗಿ ತುಂಬಾ ನಿದ್ರೆಗೊಂಡಳು ಎಚ್ಚರವಿರಲಿಲ್ಲ. ನಂತರ ಬೆಳಿಗ್ಗೆ ಎದ್ದು ಲಕ್ಷ್ಮಮ್ಮ ಏನಂದ್ರೆ ಏನಂದ್ರೆ ಅಂತ ಕೂಗುತ್ತಿದ್ದಳು. ಅದಕ್ಕೆ ಅಕ್ಕಪಕ್ಕದ ಮನೆಯವರು ಯಾಕೆ ಏನಾಯಿತು ಎಂದು ಕೇಳಿದರು. ಅದಕ್ಕೆ ಲಕ್ಷ್ಮಮ್ಮ ನನ್ನ ಗಂಡನನ್ನು ನೋಡಿದ್ರ ಎಂದು ಕೇಳಿದಳು. ಎಲ್ಲರೂ ಕೂಡ ನಾನು ನೋಡಿಲ್ಲ ನೋಡಿಲ್ಲ ಎನ್ನುತ್ತಿದ್ದರು. ನೆನ್ನೆ ನನ್ನ ಮಗಳು ಕಾಲೇಜಿಗೆ ಹೋದವಳು ಬರಲಿಲ್ಲ ಅವಳನ್ನು ಹುಡುಕಿಕೊಂಡು ಹೋದವರು ಇವರು ಬಂದಿಲ್ಲವಲ್ಲ ಅಯ್ಯೋ ದೇವರೆ ಅಂತಹ ಅಳುತ್ತಾ ಕುಳಿತುಬಿಟ್ಟಳು. ಮಗಳನ್ನು ಹುಡುಕಿಕೊಂಡು ಹೋದ ಮಾದಪ್ಪ ಏನಾದರೂ ಎಂದರೆ ರೌಡಿಗಳು ಅವರನ್ನು ಎತ್ತಿಕೊಂಡು ಹೋಗುವಾಗ ಕೈಯಲ್ಲಿದ್ದ ಬ್ಯಾಗ್, ಕಾಲಿನಲ್ಲಿ ಇದ್ದ ಚಪ್ಪಲಿಗಳನ್ನು ನೋಡಿ ಅವನು ಆ ಕಡೆಗೆ ಹೊರಟ. ಅಲ್ಲಿ ಸಿರಿ ಸತ್ತು ಬಿದ್ದಿರುವುದನ್ನು ನೋಡಿದ ಮಾದಪ್ಪ ಕಿರುಚಿಕೊಂಡು ಅದನ್ನು ನೋಡಿ ರೌಡಿಗಳು ಅವನು ಇನ್ನು ನಮ್ಮ ಬಗ್ಗೆ ಎಲ್ಲರಿಗೂ ಹೇಳಿ ಬಿಡುತ್ತಾನೆ ಎಂದು ಅವನನ್ನು ಕೂಡ ಸಾಯಿಸಿ ಇಬ್ಬರನ್ನು ತೆಗೆದುಕೊಂಡು ಒಂದು ನದಿಗೆ ಎಸೆದು ಬಿಡುತ್ತಾನೆ. ಲಕ್ಷ್ಮಮ್ಮ ಅವಳ ದೊಡ್ಡ ಮಗಳು ಮತ್ತು ಅಳಿಯನಿಗೆ ಪೋನ್ ಮಾಡುತ್ತಾಳೆ. ಈ ಎಲ್ಲಾ ವಿಷಯವನ್ನು ಹೇಳುತ್ತಾಳೆ. ಅದಕ್ಕೆ ಅವರು ಸರಿ ಅಮ್ಮ ಅಲ್ಲಿಗೆ ಬರುತ್ತೇನೆ ಎನ್ನುತ್ತಾಳೆ. ಅವರು ಕೂಡ ಎಲ್ಲ ಕಡೆ ಹುಡುಕಿ ಕೊನೆಗೆ ಮನೆಗೆ ಬರುತ್ತಾನೆ. ಅದಕ್ಕೆ ಅಮ್ಮ ಎಲ್ಲಾ ಕಡೆ ಹುಡುಕಿದೆವು ಎಲ್ಲೂ ಸಿಗಲಿಲ್ಲ ಎಂದರು. ಅದಕ್ಕೆ ಅಮ್ಮ ಸರಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಟ್ ಕೊಡೋಣ ಎಂದು ಹೋಗಿ ಕಂಪ್ಲೇಟ್ ಕೊಟ್ಟು ಅಪ್ಪ ಮಗಳು ಕಾಣೆಯಾಗಿದ್ದಾರೆ ಹುಡುಕಿ ಕೊಡಿ ಎಂದು ಪೊಲೀಸರನ್ನು ಕೇಳಿಕೊಳ್ಳುತ್ತಾರೆ. ಆದರೆ ಇನ್ಸ್‌ಪೆಕ್ಟರ್ ಅವರು ಆ ವಿಷಯದ ಬಗ್ಗೆ ಅವರು ತಲೆಕೆಡಿಸಿಕೊಂಡಿರಲಿಲ್ಲ. ಹೋಗಿ ಕೇಳಿದರೆ ದಿನವೂ ಕೂಡ ನಾಳೆ ನಾಳೆ ಎನ್ನುತ್ತಲೆ ಇದ್ದನು. ಒಂದು ದಿನ ಅವಳು ಓದುತ್ತಿದ್ದ ಕಾಲೇಜಿನ ಬಳಿ ವಿಚಾರಿಸಿದರು. ಆದರೆ ಅವರು ಏನೂ ಹೇಳಿಲಿಲ್ಲ. ಶೃತಿ ಮೊದಲೇ ಗರ್ಭಿಣಿಯಾಗಿದ್ದರಿಂದ ಅವಳಿಗೆ ಒಂದು ಹೆಣ್ಣು ಆಯಿತು. ಅಮ್ಮ ಅವರ ನೆನಪಿನಲ್ಲಿ ಕೊರಗುತ್ತಿದ್ದಳು. ಆ ಹೆಣ್ಣು ಮಗು ಬೆಳೆಯುತ್ತಾ ಏಳು ವರ್ಷದ ಮಗು ಆಯಿತು. ಆ ಮಗು ಶಾಲೆಗೆ ಹೋಗುವಾಗ ಸಿರಿಯ ಆತ್ಮ ಬಂದು ಅವಳ ಮೈಯಲ್ಲಿ ಸೇರಿಕೊಂಡಿತು. ಆ ಕ್ಷಣದಿಂದ ಅವಳು ಒಂದೊಂದು ರೀತಿ ನಡೆದುಕೊಳ್ಳುತ್ತಿದ್ದಳು. ಒಂದು ದಿನ ಶೃತಿಯ ಹತ್ತಿರ ಹೋಗಿ ಅಮ್ಮ ನಿನಗೆ ಒಬ್ಬಳು ತಂಗಿ ಇದ್ದಳ ಎಂದು ಕೇಳಿದಾಗ ಅವಳಿಗೆ ಆಶ್ಚರ್ಯವಾಯಿತು. ನನಗೆ ತಂಗಿ ಇರುವ ವಿಷಯ ನಿನಗೆ ಹೇಗೆ ತಿಳಿಯಿತು ಎಂದಾಗ ಅವಳ ಮೈಯಲ್ಲಿ ಸೇರಿಕೊಂಡ ಸಿರಿಯ ಆತ್ಮ ಹೇಳಿತು ನಾನು ಅಕ್ಕ ಸಿರಿ. ನಿನ್ನ ಮಗಳ ಮೈಯಲ್ಲಿ ಸೇರಿದ್ದೇನೆ ಎಂದಾಗ ಶೃತಿ, ಸಿರಿ ನೀನು ಆತ್ಮವಾಗಿ ಹೌದು ಅಕ್ಕ ನನ್ನನ್ನು ಮತ್ತು ಅಪ್ಪನನ್ನು ಸಾಯಿಸಿದ್ದಾರೆ. ನಾನು ಕಾಲೇಜಿನಿಂದ ಬರುವಾಗ ನಾಲ್ಕು ಜನ ರೌಡಿಗಳು ನನ್ನನ್ನು ಸಾಯಿಸಿದ್ದಾರೆ. ನನ್ನನ್ನು ಹುಡುಕಿಕೊಂಡು ಬಂದ ಅಪ್ಪನನ್ನು ಸಾಯಿಸಿದ್ದಾರೆ. ನನ್ನ ಮತ್ತು ಅಪ್ಪನ ಸಾವಿಗೆ ಈ ನಾಲ್ಕು ರೌಡಿಗಳು ಕಾರಣ ಇವರೇ ಇವರನ್ನು ಸುಮ್ಮನೆ ಬಿಡಬೇಡಿ ಅವರಿಗೆ ಶಿಕ್ಷೆಯಾಗಬೇಕು. ನನ್ನ ಮತ್ತು ಅಪ್ಪನ ಆತ್ಮಕ್ಕೆ ಶಾಂತಿ ಸಿಗಬೇಕು ಎಂದು ಆ ಆತ್ಮ ಹೊರಟು ಹೋಯಿತು. ಮರುದಿನ ಶೃತಿ ಗಂಡನಿಗೂ ಮತ್ತು ಅಮ್ಮನಿಗೆ ಆತ್ಮ ಹೇಳಿದ ಮಾತುಗಳೆನ್ನೆಲ್ಲ ಹೇಳಿದಳು. ನಂತರ ಶೃತಿ ಕೋರ್ಟಿಗೆ ಕರೆದುಕೊಂಡು ಹೋಗಿ ಕೋರ್ಟಿನಲ್ಲಿ ವಿಷಯವನ್ನೆಲ್ಲ ಹೇಳಿ ನನಗೆ ಅನ್ಯಾಯವಾಗಿದೆ ನ್ಯಾಯ ಕೊಡಿಸಿ ಎಂದರು. ಅದಕ್ಕೆ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಟ್ ಕೊಡಿ ಎಂದರು. ಅದಕ್ಕೆ ಅವರು ಹೇಳಿದರು ಮೊದಲು ಅಲ್ಲಿಗೆ ಹೋಗಿ ಕಂಪ್ಲೇಟ್ ಕೊಟ್ಟೆ. ಆದರೆ ಅವರು ಆಕ್ಷನ್ ತೆಗೆದುಕೊಳ್ಳಲಿಲ್ಲ ಎಂದರು. ಆಗ ಅವರು ಇನ್ಸ್‌ಪೆಕ್ಟರ್ ಕರೆತರಿಸಿದರು. ಇವರು ಕಂಪ್ಲೇಟ್ ಕೊಟ್ಟಿದ್ರ ಎಂದು ಕೇಳಿದಾಗ ಹೌದು ಎಂದರು. ನೀವು ಏಕೆ ಇವರ ಮೇಲೆ ಆಕ್ಷನ್ ತೆಗೆದುಕೊಳ್ಳಲಿಲ್ಲ ಆ ನಾಲ್ಕು ಜನ ರೌಡಿಗಳನ್ನು ಕರೆತನ್ನಿ ಎಂದರು. ಇನ್ಸ್‌ಪೆಕ್ಟರ್ ಹುಡುಕಿ ಕರೆತಂದರು. ಕೋರ್ಟಿನಲ್ಲಿ ವಿಚಾರಿಸಿದಾಗ ಆ ನಾಲ್ಕು ಜನ ರೌಡಿಗಳು ಎಲ್ಲಾ ಸತ್ಯವನ್ನು ಒಪ್ಪಿಕೊಂಡರು. ಕೋರ್ಟ್‌ನಲ್ಲಿ ಅವರಿಗೆ ಗಲ್ಲು ಶಿಕ್ಷೆ ಪ್ರಕಟವಾಯಿತು. ಅಲ್ಲದೆ ಇನ್ಸ್‌ಪೆಕ್ಟರ್ ಕೂಡ ಅವರ ಕೆಲಸವನ್ನು ಕಳೆದುಕೊಂಡರು. ಕೊನೆಗೆ ಅವರಿಗೆ ನ್ಯಾಯ ಸಿಕ್ಕಿತು. ಸಿರಿ ಮತ್ತು ಮಾದಪ್ಪನ ಆತ್ಮಕ್ಕೆ ಶಾಂತಿ ಸಿಕ್ಕಿತು. ಆದರೆ ಅಮ್ಮ ಮತ್ತು ಅಕ್ಕ ತುಂಬಾ ದುಃಖದಿಂದ ಜೀವನ ಸಾಗಿಸಬೇಕಾಯಿತು.

**ನೀತಿ : ವ್ಯಕ್ತಿ ಸತ್ತರೂ ನ್ಯಾಯ ಎಂದಿಗೂ ಸಾಯುವುದಿಲ್ಲ... ಕಥೆ ಬರೆದವರು : ಜಯಲಕ್ಷ್ಮಿ 8ನೇತರಗತಿ**

**ಸ.ಹಿ.ಪ್ರಾ.ಶಾಲೆ, ಕಣ್ಣೂರು**

## ಅನಿಸಿಕೆ

ತಿಂಗಳ ಉತ್ತಮ ಪುಸ್ತಕವು ನನಗೆ ಹೊಸ ಹೊಸ ನಾಟಕಗಳನ್ನು ಕಲಿತು ಅದರಲ್ಲಿ ಉತ್ತಮ ಅಂಶಗಳನ್ನು ನನ್ನ ಮುಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಸಹಾಯವಾಗುತ್ತಿದೆ. ವಿವಿಧ ರೀತಿಯ ನಾಟಕಗಳನ್ನು ಕಲಿಯಲು ನನಗೆ ಒಂದು ಅವಕಾಶ ಸಿಕ್ಕಿದೆ. ಇದರಿಂದ ಮಾತಿನ ಕೌಶಲ್ಯ ಬೆಳೆಸಿಕೊಳ್ಳಲು ನನಗೆ ಅನುಕೂಲವಾಗಿದೆ. ಬುಕ್ ಕ್ಲಬ್‌ನ ನಾಟಕದಲ್ಲಿರುವ ಪಾತ್ರಗಳನ್ನು ಚರ್ಚಿಸುವುದರಲ್ಲಿ ಮೂಲಕ ನಾವೆಲ್ಲರೂ ಚರ್ಚಾ ಮಾಡುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬಹುದು. ಅಲ್ಲದೆ ವಿಜಯವಾಣಿ ಪತ್ರಿಕೆಯಲ್ಲಿ ಬರುವ ವಿಷಯಗಳಿಗೆ ಕಲಿತು ಅವುಗಳಿಗೆ ಉತ್ತರಿಸುತ್ತೇನೆ. ಇದು ನನಗೆ ಹೆಚ್ಚಿನ ಸಾಮಾನ್ಯ ಜ್ಞಾನವನ್ನು ಬೆಳಸಿಕೊಳ್ಳುವಲ್ಲಿ ಸಹಾಯಕವಾಗಿದೆ.

**ಲಕ್ಷ್ಮಿ. ಎಲ್.ಆರ್. 8ನೇ ತರಗತಿ,**
**ಸರ್ಕಾರಿ ಮಾದರಿ ಹಿ.ಪ್ರಾ.ಶಾಲೆ, ಹನೂರು.**

## ಅನಿಸಿಕೆ


ಆಶ್ರಯ ಸಂಸ್ಥೆಯ ಕನಸಿನ ಕೂಸು "ಅರಿವಿನ ಅರಮನೆ". ಇದು ಜ್ಞಾನವನ್ನು ನೀಡುವುದರ ಜೊತೆ ಮಕ್ಕಳಲ್ಲಿ ಅಡಗಿರುವ ಸುಪ್ತಶಕ್ತಿಯನ್ನು ಹೊರತೆಗೆಯುತ್ತಿದೆ. ಹನೂರು ಗುಡ್ಡಗಾಡು ಪ್ರದೇಶದ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಚಿತ್ರಕಲಾ ತರಗತಿಯನ್ನು ನಡೆಸುತ್ತಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ. ಸಂಸ್ಥೆ ಮಾಡುವ ಈ ಮಹತ್ಕಾರ್ಯಕ್ಕೆ ನನ್ನನ್ನು ಚಿತ್ರಿಕಲಾ ಶಿಕ್ಷಕನಾಗಿ ಆಯ್ಕೆ ಮಾಡಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿರುವುದು ಹೆಮ್ಮೆಯ ವಿಷಯವಾಗಿದೆ.

ಶಾಲೆಯಲ್ಲಿ ಮಕ್ಕಳ ಜೊತೆಗೂಡಿ ಚಿತ್ರಗಳನ್ನು ಬರೆಯುವಾಗ ಮನಸ್ಸಿನಲ್ಲಿರುವ ನೋವುಗಳೆಲ್ಲಾ ದೂರವಾಗಿ ನಮ್ಮದೇ ಆದ ಒಂದು ಸುಂದರ ಲೋಕವು ಸೃಷ್ಠಿಯಾಗುತ್ತದೆ. ಆ ಕ್ಷಣದಲ್ಲಿ ನನ್ನ ನಾನು ಮರೆತು, ಮಕ್ಕಳಲ್ಲಿ ಮಕ್ಕಳಾಗಿ ಕಲೆಯನ್ನು ಕಲಿಸುವಲ್ಲಿ ನಿರತನಾಗುವಂತೆ ಮಾಡುವ ಶಿಕ್ಷಕ ಕೆಲಸ ತೃಪ್ತಿಯನ್ನು ಕೊಡುತ್ತದೆ. ನನ್ನ ಮಾರ್ಗದರ್ಶನದಲ್ಲಿ ಕಲಿತ ಮಕ್ಕಳು ಚಿತ್ರಕಲಾ ಸ್ಪರ್ಧೆಗಳಲ್ಲಿ ಹಾಗೂ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದಾಗ ನನಗೆ ಎಲ್ಲಿಲ್ಲದ ಆನಂದ. ಇಂತಹ ಮಧುರ ಕ್ಷಣವನ್ನು ನೆನಸಿಕೊಂಡಾಗ ಜೀವನದ ಸಾರ್ಥಕವೆನಿಸುತ್ತದೆ.

**ಸಿದ್ದರಾಜು, ಚಿತ್ರಕಲಾ ಶಿಕ್ಷಕರು,**
**ಕೊಳ್ಳೇಗಾಲ**



ಪೂಜಾ. ಎಸ್ ಕೆಂಪಯ್ಯನಹಟ್ಟಿ



## ನಿಮಗಿದೂ ಗೊತ್ತೆ?

1) ಚಿಪ್ಕೋ ಆಂದೋನ ಪ್ರಾರಂಭಿಸಿದವರು ಯಾರು?
2) ದಕ್ಷಿಣ ಪಥೇಶ್ವರ ಎಂಬ ಬಿರುದನ್ನು ಪಡೆದವರು ಯಾರು?
3) ಕರ್ನಾಟಕದಲ್ಲಿ ಭೂಕಂಪ ಮಾಪನ ಕೇಂದ್ರ ಎಲ್ಲಿದೆ?
4) ಅಯೊಡಿನ್ ಕೊರತೆಯಿಂದ ಉಂಟಾಗುವ ಅಸ್ವಾಸ್ಥ್ಯ ಯಾವುದು?
5) ಇತ್ತೀಚೆಗೆ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪದಕ ಪಡೆದ ಭಾರತೀಯ ಮಹಿಳೆ ಯಾರು?
6) ಕರ್ನಾಟಕದ 8ನೇ ಜ್ಞಾನಪೀಠ ಪುರಸ್ಕೃತರು ಯಾರು?
7) ಶಬ್ಧವನ್ನು ಅಳೆಯಲು ಬಳಸುವ ಮಾಪನ ಯಾವುದು?
8) ಭಾರತದ ಪ್ರಧಾನ ರಾಕೆಟ್ ಮತ್ತು ಉಪಗ್ರಹ ಉಡಾವಣೆಯ ಸಂಸ್ಥೆಯ ಹೆಸರೇನು?
9) "ಮೂಕಜ್ಜಿಯ ಕನಸುಗಳು" ಬರೆದ ಲೇಖಕರು ಯಾರು?
10) ಹಾಕಿ ಮಾಂತ್ರಿಕ ಧ್ಯಾನ್‌ಚಂದ್‌ರವರ ಹುಟ್ಟಿದ ದಿನವನ್ನು ಯಾವ ದಿನವಾಗಿ ಆಚರಿಸಲಾಗುತ್ತಿದೆ?



Printed at RAJ NET & DTP, Kollegal-571440